ಪ್ರತಿಬಿಂಬ

PRATIBIMBA – Multidisciplinary Kannada Research Journal of IIMRD
ISSN: 2582-2284
Vol-2 Issue 2, Sep-Oct 2020, 89-97
©IIMRD, Mysuru
IIMRD JOURNALS
www.iimrd.com

# ವಚನ ಯುಗದಲ್ಲಿ ಜಾತಿ ವ್ಯವಸ್ಥೆ ಮತ್ತು ಕಾಯಕನಿಷ್ಠೆ

**ವೈ.ಸಿ. ಕುಮಾರಸ್ವಾಮಿ[1] ಮತ್ತು ಡಾ. ಟಿ.ಕೆ.ಶರತ್ ಕುಮಾರ್[2]**

**ಪೀಠಿಕೆ**

ಭಾಷೆ ಎಂಬುದು ಸಂವಹನ ಮಾಧ್ಯಮವಾಗಿದೆ. ಅದು ನಾಗರಿಕತೆ, ಸಂಸ್ಕೃತಿಯ ಅರ್ಥವನ್ನು ತನ್ನಲ್ಲಿ ಹುದುಗಿಸಿಕೊಂಡಿರುತ್ತದೆ. ಭಾಷೆ ಭಾವನೆಗಳನ್ನು ವ್ಯಕ್ತಪಡಿಸಲು ಇರುವ ಸರಳ ಮಾರ್ಗ. ಮನುಷ್ಯನ ಸಂಸ್ಕೃತಿಯ ಜೊತೆಗೆ ಸಾಹಿತ್ಯವೂ ಅವಿನಾಭಾವ ಸಂಬಂಧವನ್ನು ಹೊಂದಿದೆ. ಅಕ್ಷರವನ್ನು ಅರಿಯದ ಜನರು ತಮ್ಮ ಜೀವನವನ್ನು ಕಾವ್ಯವಾಗಿಸುವ ನಿಟ್ಟಿನಲ್ಲಿ ಹಾಡುಗಬ್ಬದ ಮೂಲಕ ತಮ್ಮ ನೋವು ನಲಿವುಗಳನ್ನು ಹೇಳುತ್ತಿದ್ದರು. ಅದೇ ಇಂದು ಜಾನಪದ ಸಾಹಿತ್ಯ ಎಂದು ಗುರುತಿಸಲ್ಪಡುತ್ತಿದೆ. ಜನಪದ ಸಾಹಿತ್ಯದ ನಂತರ ಲಿಖಿತ ಸಾಹಿತ್ಯ ಬೆಳವಣಿಗೆಯಾಯಿತು. ಇದನ್ನು ಶಿಷ್ಟ ಸಾಹಿತ್ಯ ಎಂದು ಗುರುತಿಸಬಹುದು. ಭಾರತೀಯ ಭಾಷೆಗಳಲ್ಲಿ ಸಂಸ್ಕೃತ, ಪ್ರಾಕೃತ, ಪಾಳಿ, ಪೈಶಾಚಿ ಎಂಬೆಲ್ಲ ಹಲವು ಭಾಷೆಗಳು ಮೊದಲು ಪ್ರಾಮುಖ್ಯತೆಯನ್ನು ಪಡೆದುಕೊಂಡಿದ್ದವು. ಅದರಲ್ಲೂ ಸಂಸ್ಕೃತ ಭಾಷೆಯು ಶ್ರೇಷ್ಠ ಎಂಬ ಮಾತಿನ ಜೊತೆಗೆ ಸಂಸ್ಕೃತ ಭಾಷೆ, ಮೊದಲ ಸ್ಥಾನವನ್ನು ಪಡೆದುಕೊಂಡು ದೈವಭಾಷೆಯ ಹಿರಿಮೆಗೆ ಪಾತ್ರವಾಹಿತು. ನಂತರದ ದಿನಗಳಲ್ಲಿ ಭಾಷೆಗಳು ಕಾಲದೊಂದಿಗೆ ಬದಲಾಗುತ್ತ, ಅಳಿಯುತ್ತಾ, ಉಳಿಯುತ್ತಾ, ಬೆಳೆಯುತ್ತಾ ಬರುತ್ತಿರುವುದು ಆಯಾದ ರಾಷ್ಟ್ರ, ರಾಜ್ಯ ಭಾಷೆಗಳ ಸಂದರ್ಭಗಳಲ್ಲಿ ನಡೆದ ಸಂಗತಿಗಳಾಗಿವೆ.

ಸಾಹಿತ್ಯವು ಓದುಗರಿಗೆ ನಿಲುಕುವ ದೃಷ್ಟಿಯಿಂದ ತನ್ನಲ್ಲಿಯೂ ಕೂಡ ಅನೇಕ ಮಾರ್ಪಾಡುಗಳನ್ನು ಮಾಡಕೊಂಡು ಸರಳೀಕರಿಸಿಕೊಂಡು ಸಾಗುತ್ತ ಬಂದಿದೆ. ಹಿಂದಿನ ದಿನಗಳಲ್ಲಿ ಪಂಡಿತರಿಗೆ ಸೀಮಿತವಾಗಿದ್ದ ಸಾಹಿತ್ಯವು ಜನ ಸಾಮಾನ್ಯರನ್ನು ತಲುಪಲು ಸಾಧ್ಯವಾಯಿತು. ಕನ್ನಡ ಭಾಷೆಯು ಸಾವಿರ ವರ್ಷಗಳಿಗಿಂತ ಹಿಂದಿನ ಇತಿಹಾಸವನ್ನು ಹೊಂದಿರುವ ಪ್ರಚೀನ ಭಾಷೆಯಾಗಿದೆ. ಕನ್ನಡ ಸಾಹಿತ್ಯವು ಬಹಳ ಹಿಂದಿನಿಂದಲೂ ವಿಫುಲವಾಗಿ ಅಭಿವೃದ್ಧಿ ಹೊಂದಿದೆ. ಅನೇಕ ಕವಿ ಪುಂಗವರು ಕನ್ನಡ ಭಾಷೆಯನ್ನು ಅತ್ಯಂತ ಶ್ರೀಮಂತಗೊಳಿಸಿದ್ದಾರೆ. ಆದಿಕವಿ ಪಂಪನಿಂದ ಹಿಡಿದು ಇಂದಿನ 21ನೇ ಶತಮಾನದವರೆಗೂ ಕನ್ನಡ ಸಾಹಿತ್ಯ ಶ್ರೀಮಂತಗೊಂಡಿದೆ. ಕನ್ನಡ ಸಾಹಿತ್ಯದಲ್ಲಿ ಅನೇಕ ಮೇರು ಕೃತಿಗಳು ಪ್ರಕಟಗೊಂಡಿವೆ. ಕನ್ನಡ ಸಾಹಿತ್ಯ ಚರಿತ್ರೆಕಾರರು ಕನ್ನಡ ಸಾಹಿತ್ಯದಲ್ಲಿ ಆಯಾ ಕಾಲಘಟ್ಟದಲ್ಲಿ ಮಹತ್ವದ ಕೃತಿಗಳನ್ನು ರಚಿಸಿದ ಕವಿಗಳನ್ನು ದಾಖಲಿಸಿದ್ದಾರೆ. ಇಂತಹ ಸಾಹಿತ್ಯದ ವಿಶೇಷವಾಗಿ ಕಂಡುಬರುವುದೇ ವಚನಯುಗ ಅಥವಾ ಬಸವ ಯುಗ. ಸಾಹಿತ್ಯಕವಾಗಿ ವಚನಯುಗವನ್ನೇ ಮಧ್ಯಕಾಲೀನ ಯುಗ ಎಂದೂ ಕರೆಯಬಹುದು. ಬಸವೇಶ್ವರನಿಂದ ಕುಮಾರವ್ಯಾಸನವರೆಗೆ ಅಂದರೆ 12ನೇ ಶತಮಾನದ ಮಧ್ಯದಿಂದ

[1] *ಸಂಶೋಧಕರು, ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ.*

[2] *ಸಹಾಯಕ ಪ್ರಾಧ್ಯಾಪಕರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಬೆಳ್ತಂಗಡಿ, ದಕ್ಷಿಣ ಕನ್ನಡ.*

15ನೇ ಶತಮಾನದವರೆಗೆ ಈ ಯುಗದ ಹರವಿದೆ. ಈ ಯುಗಕ್ಕೆ ವೈವಿಧ್ಯತೆಯಿದೆ. ವೈಶಿಷ್ಟ್ಯತೆ ಇದೆ. ಹೊಸ ಬಗೆಯ ಆಧ್ಯಾತ್ಮಿತ ತೇಜಸ್ಸು ಇದೆ. ಪ್ರಾಯೋಗಶೀಲತೆ ಇದೆ. ಪಂಡಿತ ಕವಿಗಳ ಜೊತೆಗೆ ಅನೇಕ ಆಧ್ಯಾತ್ಮಿಗಳು, ಅನುಭಾವಿಗಳು ವಚನ ಸಾಹಿತ್ಯ ನಿರ್ಮಾತರಾದರು. ಹೊಸ ನಿರ್ಮಾತೃಗಳ ಮುಂದಾಳತ್ವವನ್ನು ಬಸವಣ್ಣನವರು ವಹಿಸಿದ್ದರು. ಬಹಳ ವಿಪುಲವಾಗಿ ಕೃಷಿಗೊಂಡ ವಚನ ಸಾಹಿತ್ಯದಿಂದಾಗಿ ಕಾಲವನ್ನು ವಚನಯುಗ ಎಂದೇ ಗುರುತಿಸಲಾಗುತ್ತದೆ. 12ನೇ ಶತಮಾನ, ಕನ್ನಡ ಸಾಹಿತ್ಯ ಲೋಕದಲ್ಲಿ ಅತ್ಯಂತ ಮಹತ್ವ ಪೂರ್ಣವಾದ ಕಾಲಘಟ್ಟ. ಈ ಕಾಲದಲ್ಲಿ ಅನೇಕ ಅನುಭಾವಿಗಳು ತಮ್ಮ ವಚನಗಳಿಂದಾಗಿ ಮಾನ್ಯರಾದರು.

ಸಮಾಜ ಸುಧಾರಣೆಯ ಕಾಳಜಿಯೊಂದಿಗೆ ಮೂಢನಂಬಿಕೆ ಕಂದಾಚಾರಗಳಿಂದ ಜಡವಾಗಿದ್ದ ಸಮಾಜವನ್ನು ಪರಿವರ್ತಿಸುವ ಸಂಕಲ್ಪದಿಂದಾಗಿ ವಿನೂತನ ಚಳುವಳಿಯನ್ನು ಪ್ರಾರಂಭಿಸಿದರು. ಮೇಲು ಕೀಳು ಎಂಬ ವರ್ಣ ಅಸಮಾನತೆ, ಬಡವ–ಬಲ್ಲಿದನೆಂಬ ವರ್ಗತಾರತಮ್ಯ, ಹೆಣ್ಣು ಗಂಡು ಎಂಬ ಲಿಂಗಬೇದ ಇವೆಲ್ಲ ತಾರತಮ್ಯ ವ್ಯವಸ್ಥೆಯನ್ನು ಹೋಗಲಾಡಿಸುವ ಸಲುವಾಗಿ ಸಮಾನತೆಯ ಆಧಾರದ ಮೇಲು ಹೊಸ ಸಮಾಜವನ್ನು ಅವರು ಕಟ್ಟ ಬಯಸಿದರು. ಇದಕ್ಕಾಗಿಯೇ ಕಲ್ಯಾಣದಲ್ಲಿ ಅನುಭವ ಮಂಟಪ ಸ್ಥಾಪನೆಯಾಯಿತು. ಇಂದಿನ ಆಧುನಿಕ ಸಂಪತ್ತನ್ನು ಹೋಲುವ ಅನುಭವ ಮಂಟಪದಲ್ಲಿ ಶರಣರು ವಿಚಾರ ವಿಮರ್ಶೆ ಶರಣತತ್ವ ಚಿಂತನೆ, ವಚನ ವಿಶ್ಲೇಷಣೆ ಮುಂತಾದ ಆಧ್ಯಾತ್ಮಿಕ ವಿಚಾರಗಳಿಗೆ ಮಹಹತ್ವ ನೀಡಲಾಗಿತ್ತು. ಈ ಶೂನ್ಯ ಸಿಂಹಾಸನದ ಅಧ್ಯಕ್ಷತೆಯನ್ನು ಅಲ್ಲಮ ಪ್ರಭು ವಹಿಸಿಕೊಂಡಿದ್ದರೆ ಇದರ ಸಂಚಾಲಕರಾಗಿ ಬಸವಣ್ಣನವರು ಕಾರ್ಯನಿರ್ವಹಿಸುತ್ತಿದ್ದರು. ಚನ್ನಬಸವಣ್ಣ, ಅಕ್ಕ ನಾಗಮ್ಮ, ಹಡಪದ ಅಪ್ಪಣ್ಣ, ಮಡಿವಾಳ ಮಾಚಯ್ಯ, ಮಹಾದೇವಿ ಅಕ್ಕ ಮುಂತಾದ ನೂರಾರು ವಚನಕಾರರು ಕಾರ್ಯಕರ್ತರಾಗಿ ತಮ್ಮನ್ನು ತೊಡಗಿಸಿಕೊಂಡರು. ಸೊನ್ನಲಿಗೆಯಿಂದ ಸಿದ್ಧರಾಮ ಶಿವಯೋಗಿ, ನೆರೆಯ ಪ್ರಾಂತ್ಯದಿಂದ ತೆಲುಗು ಬೊಮ್ಮಯ್ಯ ಕಾಶ್ಮೀರದಿಂದ ಮಹಾದೇವ–ಮಹದೇವಮ್ಮ ಹೀಗೆ ನೂರಾರು ಚೈತನ್ಯಗಳು ಬಂದು ಕಲ್ಯಾಣದಲ್ಲಿ ಸಂಗಮಿಸಿತು.

ಇಡೀ ಸಮುದಾಯ ಸಾಮೂಹಿಕವಾಗಿ ಅಸಮಾನತೆ, ದುಃಖ, ದಾರಿದ್ರ್ಯ, ಹಿಂಸೆ, ಕ್ರೌರ್ಯ, ಮೌಢ್ಯತೆಯಿಂದ ತತ್ತರಿಸಿ ಹೋಗಿದ್ದ ಸಮಾಜವನ್ನು ಪರಿವರ್ತಿಸಿ ಅಲ್ಲಿ ಸಮಾನತೆ, ಸುಖ, ಸಂತೋಷ, ಶಾಂತಿ, ಆತ್ಮ ಜ್ಞಾನದ ಬೀಜವನ್ನು ಬಿತ್ತಿ ಹೊಸ ವಾತಾವರಣ ನಿರ್ಮಿಸುವ ಶುಭ ಸಂಕಲ್ಪ ಮಾಡಿದರು. ಇದು ಕೇವಲ ಕರ್ನಾಟಕದಲ್ಲಲ್ಲ ಇಡೀ ಭಾರತದಲ್ಲೇ ಒಂದು ಐತಿಹಾಸಿಕ ಮಹತ್ವದ ಸಂದರ್ಭ ಎನ್ನಬಹುದು.

## ಐತಿಹಾಸಿಕ ಹಿನ್ನಲೆ

ವಚನಯುಗದಲ್ಲಿ ಶರಣಪರಂಪರೆ ಚೇತನಗೊಂಡು ವ್ಯಾಪಿಸಲು ದಕ್ಷಿಣ ಭಾರತದಲ್ಲಿಯ ಅಂದಿನ ರಾಜಕೀಯ ಧಾರ್ಮಿಕ ವಾತಾವರಣ ಕಾರಣವಾಯಿತು ಎನ್ನಬಹುದು. 10ನೇ ಶತಮಾನದ ಅವಧಿಯಲ್ಲಿ ರಾಷ್ಟ್ರಕೂಟರು ಮತ್ತು ಗಂಗರು ಜೈನಧರ್ಮಕ್ಕೆ ವಿಶೇಷವಾದ ಪ್ರೋತ್ಸಾಹವನ್ನು ನೀಡಿದ್ದರು. ಈ ನಡುವೆ ಜೈನ ಮತ್ತು ಬ್ರಾಹ್ಮಣ ವರ್ಗಗಳ ನಡುವೆ ವಾದ–ವಿವಾದಗಳು ಘಟಿಸಿರಲೂ ಸಾಧ್ಯವಿದೆ. ನಂತರದ ದಿನಗಳಲ್ಲಿ ರಾಜಕೀಯವು ಭಿನ್ನವಾಗಿದ್ದು ಜೈನ ಧರ್ಮದ ಉಳಿವಿಗೆ ಅದು ಪೂರಕವಾಗಿರಲಿಲ್ಲ

ಎನ್ನಬಹುದು. ಗಂಗ ರಾಜರು ಅವನತಿ ಹೊಂದಿದಂತೆ ಜೈನಧರ್ಮಕ್ಕೆ ಬಲವಾದ ಪೆಟ್ಟಾಯಿತು. ಚೋಳರ ನಾಡಿನಿಂದ ಬಂದ ರಾಮಾನುಜಚಾರ್ಯರು ಪ್ರಭಾವ ಬೀರಲಾರಂಭಿಸಿದ್ದರು. ಈ ಸಂದಭದಲ್ಲಿಯೇ ಜನರು ಪರ್ಯಾಯ ಧರ್ಮಗಳತ್ತ ದೃಷ್ಟಿಹರಿಸಲು ಆರಂಭಿಸಿದ್ದರು. ಇದರಿಂದಾಗಿ ಶೈವ–ವೈಷ್ಣವಧರ್ಮಗಳು ಪುನರುಜ್ಜೀವನಗೊಳ್ಳಲು ಅಣಿಗೊಂಡಿದ್ದವು. ಮುಂದೆ ಕ್ರಿ.ಶ. 1162–82ರ ವರೆವಿಗೆ ಚಾಳುಕ್ಯ ರಾಜ್ಯವನ್ನು ಕಳಚುರಿಗಳು ಆಳಿದರು. ಇವರಲ್ಲಿ ಮಹಾತ್ವಾಕಾಂಕ್ಷಿಯುಳ್ಳ ಸಾಮಂತರಾಜನೇ ಬಿಜ್ಜಳ ಕಳಚುರಿ ಬಿಜ್ಜಳನು ಅಂದಿನ ರಾಜಕೀಯ ಪರಿಸ್ಥಿತಿಯನ್ನು ಸರಿಯಾಗಿ ಅರ್ಥಮಾಡಿಕೊಂಡಿದ್ದದ ಬಿಜ್ಜಳ, ಚಾಳುಕ್ಯ ಸಾಮ್ರಾಜ್ಯವಾಳಲು ತೊಡಗುತ್ತಾನೆ. ಈ ಕಳಚುರಿಗಳ ಕಾಲ ನಮ್ಮ ಸಾಹಿತ್ಯ ಸಂದರ್ಭದಲ್ಲಿ ಅತ್ಯಂತ ಪ್ರಮುಖವಾದುದು. ಈ ಕಾಲಘಟ್ಟದಲ್ಲಿ ನೂರಾರು ವಚನಕಾರರು, ಚಿಂತಕರು, ಅನುಭಾವಿಗಳು ಕಾಣಿಸಿಕೊಂಡರು. ಕೇವಲ ರಾಜಕೀಯ ಕ್ರಾಂತಿ ಅಷ್ಟೇ ಅಲ್ಲದೆ ಅದಕ್ಕಿಂತ ಮಿಗಿಲಾದ ಸಾಮಾಜಿಕ ಧಾರ್ಮಿಕ ಬದಲಾವಣೆಗಳು ಅನಿರೀಕ್ಷಿತ ನೆಲೆಗಳಲ್ಲಿ ಘಟಿಸಿದವು. ಇದರ ಪರಿಣಾಮವಾಗಿ ಕರ್ನಾಟಕ ವಿಶಿಷ್ಟ ಧರ್ಮವಾದ ವೀರಶೈವವು ಕಾಣಿಸಿಕೊಂಡಿತು. ಈ ಮಧ್ಯದಲ್ಲಿ ಚಾಳುಕ್ಯರ ನಂತರ ಸಾಮ್ರಾಜ್ಯವನ್ನು ಆಕ್ರಮಿಸುವ ಹೋರಾಟದಲ್ಲಿ ಕಳಚುರಿಗಿಂತಲೂ ಸೇವುಣರು–ಹೊಯ್ಸಳರು ಆಕ್ರಮಿಸಿಕೊಂಡರೆ ದಕ್ಷಿಣ ಭಾಗದ ಹಳೆಯ ಮೈಸೂರು ಪ್ರಾಂತ್ಯ ಹೊಯ್ಸಳರ ವಶವಾಯಿತು. ಈ ನಡುವೆ ಕಲ್ಯಾಣದಲ್ಲಿ ಕ್ರಾಂತಿ ಉಂಟಾಯಿತು. ಕಳಚೂರಿ ಬಿಜ್ಜಳನ ಕೊಲೆಯಲ್ಲಿ ಪರ್ಯಾವಸನಗೊಂಡಿತು. ಬಸವಣ್ಣನು ಕಲ್ಯಾಣವನ್ನು ತೊರೆದು ಕೂಡಲಸಂಗಮಕ್ಕೆ ತೆರಳಿದರು.

## ಧಾರ್ಮಿಕ ಸ್ಥಿತಿಗತಿಗಳು

ಸಾಮಾಜಿಕ ಸ್ಥಿತಿಗತಿಗಳು, ರಾಜಕೀಯ ದೃಷ್ಟಿಯಿಂದ ಹಾಗೂ ಧಾರ್ಮಿಕ ದೃಷ್ಟಿಯಿಂದಲೂ ಈ ಕಾಲಘಟ್ಟವು ಸಂಕೀರ್ಣ ಯುಗವೆಂದೇ ಹೇಳಬಹುದು. ಜೈನಧರ್ಮದ ಪ್ರಭಾವವು ಇಳಿಮುಖವಾಗಿ ಸಾಗಿತ್ತು. ಪ್ರಾಚೀನ ಹಿಂದೂ ಧರ್ಮದತ್ತ ರಾಜರುಗಳ ಒಲವು ಇದ್ದ ಕಾರಣದಿಂದಾಗಿ ಹಿಂದೂ ಧರ್ಮದತ್ತ ರಾಜರ ಒಲವು ಹರಿದುದನ್ನು ಸ್ಮರಿಸಬಹುದು. 11–12ನೇ ಶತಮಾನದಲ್ಲಿ ಶೈವ ಧರ್ಮವೂ ತನ್ನ ಪುನರುತ್ಥಾನವನ್ನು ನಿರೀಕ್ಷೆ ಮೀರಿ ವ್ಯಾಪಿಸತೊಡಗಿತ್ತು. ಜೊತೆ ಜೊತೆಗೆ ವೈಷ್ಣವ ಧರ್ಮವು ತನ್ನ ಅಸ್ತಿತ್ವಕ್ಕಾಗಿ ತೊಡಗಿತ್ತು.

ಸಮಾಜದಲ್ಲಿ ವರ್ಣಾಶ್ರಮ ವ್ಯವಸ್ಥೆಯು ಬಲವಾಗಿತ್ತು. ಬ್ರಾಹ್ಮಣರು ಮೇಲ್ವರ್ಗಕ್ಕೆ ಸೇರಿದವರಾಗಿದ್ದು, ಸರ್ಕಾರದಲ್ಲಿ ಉನ್ನತ ಹುದ್ದೆಯನ್ನು ಅಲಂಕರಿಸಿದ್ದರು. ಬ್ರಾಹ್ಮಣರಿಗೆ ನೀಡಿದ ದಾನ, ದತ್ತಿಗಳು ತೆರಿಗೆಗಳಿಂದ ರಿಯಾಯಿತಿ ಪಡೆದಿದ್ದವು. ಅವರಿಗೆ ಎಂತಹ ಘೋರ ಅನ್ಯಾಯಕ್ಕೂ ಮರಣದಂಡನೆ ಶಿಕ್ಷೆ ನೀಡುತ್ತಿರಲಿಲ್ಲ. ಬ್ರಹ್ಮ ಹತ್ಯೆ ಘನ ಘೋರ ಪಾಪ ಎಂದು ತಿಳಿದಿದ್ದರು. ಕ್ಷತ್ರಿಯರು ಸೈನ್ಯಗಳಲ್ಲಿ ಸೇರಿ ರಾಜ್ಯವನ್ನು ರಕ್ಷಿಸುವ ಕೆಲಸವನ್ನು, ವೈಶ್ಯರು ವ್ಯಾಪಾರ ವೃತ್ತಿಯನ್ನು ಅವಲಂಬಿಸಿದ್ದರು. ನಾಲ್ಕನೇ ವರ್ಗವಾದ ಶೂದ್ರವರ್ಗವು ಅತಿ ದೊಡ್ಡ ವರ್ಗವಾಗಿತ್ತು. ಮೇಲಿನ ಮೂರು ವರ್ಗಗಳಿಗೆ ಬೇಕಾದ ಕಾರ್ಮಿಕ ವರ್ಗ, ಸರಕು ಉತ್ಪಾದನೆ ಊಳಿಗದ ಕೆಲಸ ಮುಂತಾದ ಕೆಲಸಗಳನ್ನು ನಿರ್ವಹಿಸುತ್ತಿದ್ದರು.

ಸಂಪ್ರದಾಯಬದ್ಧ ಪರಂಪರೆಯಲ್ಲಿ ಹಿಂದಿನಿಂದಲೂ ಪೋಷಿತವಾದ ಜಾತಿವರ್ಗ ವ್ಯವಸ್ಥೆಯು ಬಲವಾಗಿತ್ತು. ಲಿಂಗ ತಾರತಮ್ಯವನ್ನು ಹೊಂದಿತ್ತು.

ಜಡ್ಡುಗಟ್ಟಿದ ಸಾಮಾಜಿಕ ವ್ಯವಸ್ಥೆಯು ಹೊಸತನಕ್ಕೆ ತೆರೆದುಕೊಳ್ಳಲು ಹಾತೊರೆ ಯುವಂತಿತ್ತು. ಆದರೆ ವಿಪರ್ಯಾಸ ಎನ್ನುವಂತೆ ಹಳೆಯ ಜಾತಿ, ವರ್ಗ, ತಾರತಮ್ಯ ಮೌಲ್ಯಗಳೇ ಮತ್ತೆ ಚಾಲನೆಗೆ ಬಂದವು ಜನರಿಗೆ ಅಗತ್ಯವಾದುದೆನ್ನುವ ಸರಳ ಮಾರ್ಗವೊಂದರ ಹುಡುಕಾಟವು ಇಲ್ಲಿ ಮಹತ್ವದ್ದಾಗಿ ಕಾಣುತ್ತದೆ. ಈ ಮಧ್ಯೆ ಕೆಲವೊಂಮೆ ವೀರಶೈವ ವೈಷ್ಣವ ಧರ್ಮಗಳು ಅಲ್ಲಿ–ಇಲ್ಲಿ ಆಶಾದಾಯಕ ಬದಲಾವಣೆಗಾಗಿ ಕೆಲವೊಮ್ಮೆ ಮಹತ್ವ ಎನಿಸುವಂತಿದ್ದವು. ಈ ದೃಷ್ಠಯಿಂದಾಗಿ ವರ್ಗ ವ್ಯವಸ್ಥೆಯಲ್ಲಿ ಬದಲಾವಣೆ ಉಂಟಾಗಿತ್ತು. ಜಾತಿಯಿಂದ ಕೆಳವರ್ಗದ ಶೂದ್ರರೂ ಸಹ ಉನ್ನತರಾಗುವ ಅವಕಾಶವು ಒದಗಿಬಂದಿತ್ತು. ಈ ರೀತಿಯ ಹಲವು ಕಾರಣಗಳಿಂದ ವಿದ್ಯೆ–ಕಲಿಕೆಯಂತಹ ಪ್ರಾಚೀನ ನಂಬಿಕೆಗಳ ಮಡಿವಂತಿಕೆಗಳಿಗೆ ಬಲವಾದ ಪೆಟ್ಟಾಯಿತು. ಆಹಾರ, ವೃತ್ತಿ, ಉಡುಗೆ–ತೊಡುಗೆ ಬದುಕಿನ ಕ್ರಮಗಳಲ್ಲಿ ಬಹುಪಾಲು ಪರಂಪರೆಯ–ಸಂಪ್ರದಾಯಗಳೇ ಉಳಿದು ಬೆಳೆದು ಬಂದವು. ಆಳುವ ವರ್ಗ ಶ್ರಮಿಕ ವರ್ಗದ ಅಂತರ್ ಸಂಬಂಧಗಳು ತೀರಾ ಬದಲಾವಣೆಯನ್ನು ಹೊಂದಿರಲಿಲ್ಲ.

ವಚನ ಚಳುವಳಿಯಿಂದಾಗಿ ಅನೇಕ ವಚನಕಾರರು ಇದನ್ನು ವಚನಗಳಲ್ಲಿ ಪ್ರಶ್ನಿಸಿದ್ದಾರೆ. ಹುಟ್ಟಿನ ಮೂಲವನ್ನು ನೋಡುವುದು ಬೇಡ, ಆತನ ಅನುಭಾವಿಕ ದೃಷ್ಠಿಯನ್ನು ನೋಡಿ ಎಂದು ಹೇಳುತ್ತಾರೆ. ವಚನ ಚಳುವಳಿಯಲ್ಲಿ ಭಾಗವಹಿಸಿದ ವಚನಕಾರರಲ್ಲಿ ಬಸವಣ್ಣ, ಚನ್ನ ಬಸವಣ್ಣ, ಅಕ್ಕಮಹಾದೇವಿ, ನೀಲಮ್ಮನಂತಹ ನಾಲ್ಕಾರು ಜನರನ್ನು ಹೊರತುಪಡಿಸಿದರೆ ಮಾದಾರ ಚನ್ನಯ್ಯ, ಡೋಹರ ಕಕ್ಕಯ್ಯ, ಅಂಬಿಗರ ಚೌಡಯ್ಯ, ಹಡಪದ ಅಪ್ಪಣ್ಣ, ಘಟ್ಟಿವಾಳಯ್ಯ, ತುರುಗಾಯಿ ರಾಮಣ್ಣ, ಮಾದಾರ ಧೂಳಯ್ಯ, ಮೋಳಿಗೆ ಮಹಾದೇವಮ್ಮ, ಕಾಳವ್ವೆ, ಸಂಕವ್ವೆ ಹೀಗೆ ಬಹುಪಾಲು ವಚನಕಾರರು ಕೆಳ ವರ್ಗದಿಂದಲೇ ಬಂದಿದ್ದರು. ಅಲ್ಲದೆ ಬಸವಣ್ಣನಂತಹ ಮೇಲ್ವರ್ಗದ ವಚನಕಾರರರಿಗೆ ಪ್ರಭಾವ ಬೀರುವಷ್ಠರ ಮಟ್ಟಿಗೆ ಸಾಧನೆಯ ನೆಲೆಗೇರಿದ್ದರು. ಮಾದಾರ ಚನ್ನಯ್ಯನ ವ್ಯಕ್ತಿತ್ವ, ಅನುಭವಕ್ಕೆ ಮಾರು ಹೋಗಿದ್ದ ಬಸವಣ್ಣನು "ಚನ್ನಯ್ಯನ ಮನೆಯ ದಾಸಿಯ ಮಗನು, ಕಕ್ಕಯ್ಯನ ಮನೆಯ ದಾಸಿಯ ಮಗಳು, ಇವರಿಬ್ಬರು ಹೊಲದಲ್ಲಿ ಬೆರಣಿಗೆ ಹೋಗಿ ಸಂಗನ ಮಾಡಿದರು ಕೂಡಲಸಂಗಮಲನ ಸಾಕ್ಷಿಯಾಗಿ ಎನ್ನುತ್ತಾನೆ.

***ಹಾಗೆ ಮುಂದುವರೆದು***
***ಅಪ್ಪನು ಮಾದಾರ ಚೆನ್ನಯ್ಯ***
***ಬೊಪ್ಪನು ನಮ್ಮ ಡೋಹರ ಕಕ್ಕಯ್ಯ***
***ಚಿಕ್ಕಯ್ಯನೆಮ್ಮಯ್ಯ ಕಾಣಯ್ಯ***
***ಅಣ್ಣನು ನಮ್ಮ ಕಿನ್ನರ ಬೊಮ್ಮಯ್ಯ***
***ಎನ್ನನೇತಕ್ಕುರಿಯರಿ ಕೂಡಲಸಂಗಯ್ಯ ಎನ್ನುತಾನೆ.***

ಪ್ರತಿಯೊಬ್ಬರಲ್ಲಿಯೂ ದೇವರನ್ನು ಕಂಡರು. ಮೇಲು, ಕೀಳು, ಬಡವ, ಬಲ್ಲಿದ ಎಂಬ ತಾರತಮ್ಯವನ್ನು ತೊಡೆದು ಹಾಕಲು ಪ್ರಯತ್ನಿಸಿದರು. ನಾಡನ್ನು ದೇವರ ಬೀಡಾಗಿಸಿದರು. ಸರ್ವೋದಯಕ್ಕೆ ಶಿವಪಥದ ಹಾದಿ ಮಾಡಿಕೊಟ್ಟಿತು. ಬಸವಣ್ಣನ ಮುಂದಾಳತ್ವದಲ್ಲಿ "ಕಾಯಕವೇ ಕೈಲಾಸ"ವೆಂಬ ಮಂತ್ರವು ಮಹಾಮಂತ್ರದಂತಾಯಿತು. "ಶಿವಯೋಗಿಯ ಶರೀರಂ ವೃತಾಸವೆಯಲಕ್ಕಾಗದು, ಅನಗೊಂಬನಿತು ಕಾಯಕವಿರಬೇಕು" ಎಂಬ ನಿಲುವು ಅವರದಾಯಿತು. ಮಾಡುವ ಉದ್ಯೋಗದ ಆಧಾರದ ಮೇಲೆ ವ್ಯಕ್ತಿತ್ವವನ್ನು ಅಳೆಯಬಾರದೆಂದು ತಿಳುವಳಿಕೆ ಮೂಡಿಸಿದರು.

ಸಮಾಜ ಅಂದು ಜಾತಿ, ಉಪಜಾತಿಗಳ ಪೆಟ್ಟಿನಿಂದ ಛಿದ್ರವಾಗಿತ್ತು. "ವರ್ಣಾನಾಂ ಕಂ ಪ್ರಯೋಜನಂ" ಎಂದು ಸಾರಿದ್ದರು. ಚತುರ್ವರ್ಣ ಮಯಾ ಸೃಷ್ಟಿ ಗುಣಕರ್ಮ ವಿಭಾಗಶಃ ಎಂದಿದ್ದರೂ, ಜನರ ಜಾತಿಯನ್ನು ಹುಟ್ಟಿನಿಂದಲೇ ಅಳೆಯುತ್ತಿದ್ದರು. ಅವರ ಗುಣವಾಗಲೀ ಅವರು ಅನುಸರಿಸುತ್ತಿದ್ದ ಕಾಯಕದ ಮಹತ್ವವಾಗಲೀ ಮರೆಯಾಗಿತ್ತು.

ಜಾತಿ ಹಿಡಿದು ಸೂತಕ ವನರಸಲೇಕೇ? ಎಂದು ಟೀಕಿಸಿದ್ದರು. ವಚನಕಾರರು

ಅನೇಕ ಕುಲಗಳನ್ನು ಮಾಡಿಕೊಂಡು ತೊಳಲುವವರನ್ನು ಕಂಡು "ಕುಲಕುಲವಾದಡೇನು ಉತ್ಪತ್ತಿ, ಸ್ಥಿತಿ, ಲಯ, ಒಂದೇ ಭೇದ ಮಾತಿನರಂಜನೆಯ ಬೇಕಾದಂತೆ ನುಡದಡೇನು? ಬಿಡುಮುಡಿಯಲ್ಲ ಎಂದರಿಯಬೇಕೆಂದಾತ ಅಂಬಿಗರ ಚೌಡಯ್ಯ.

ಹೀಗೆ ಈ ಜಾತಿ ವ್ಯವಸ್ಥೆಯಲ್ಲಿ ಕುಲಾಕುಲವೆಂಬುದು ಮಾತಿನ ರಂಜನೆಯಲ್ಲದೆ ಬೇರೇನು ಅಲ್ಲ ಎನ್ನುತ್ತಾರೆ. ಚೌಡಯ್ಯ, ಅಂಬಿಗರ ಚಱಡಯ್ಯ, ಬಸವಣ್ಣನ ಪ್ರಬಾವಲಯಕ್ಕೆ ಬರುವ ಮೊದಲ ಸಮಾಜದ ಕೆಳಸ್ತರಕ್ಕೆ ಸೇರಿದನೆಂಬ ಕಾರಣದಿಂದಾಗಿ ಸಮಾಜ ದೂರವಿಟ್ಟಿದ್ದ ವ್ಯಕ್ತಿ ಹಾಗೆಯೇ ಕಾಳವ್ವೆ ಅಸ್ಪೃಶ್ಯರೆನಿಸಿದಾಕೆ ಇವರಿಬ್ಬರಿಗೂ ಸಮಾಜದ ಅವ್ಯವಸ್ಥೆ, ದರ್ಜನ್ಯ, ಮಆನಸಿಕ ನೋವು, ತಳಮಳಗೊತ್ತಿತ್ತು. ಅದನ್ನು ಸ್ವತಃ ಅನುಭವಿಸಿಯೂ ಇದ್ದರು. ಆದ್ದರಿಂದಲೇ ಕಾಳವ್ವೆಯು ಸಮಾಜದ ಈ ರೀತಿ ನೀತಿಗಳನ್ನು ನೇರವಾಗಿ ಬಿಚ್ಚು ನುಡಿಯಿಂದ ಎಚ್ಚರಿಸಿದ್ದಾಳೆ. ಕುರಿ–ಕೋಳಿ ಕಿರಿಮೀನು ತಿಂಬವರೆಲ್ಲ ಕುಲಜ ಕುಲರೆಂದೆಂಬರು! ಶಿವನಿಗೆ ಪಂಚಾಮೃತವ ಕರೆವ ಪಶುವತಿಂಬ ಮಾದಿಗ ಕೀಳು ಜಾತಿಯೆಂಬರು ಅವರೆಂತು ಕೀಳು ಜಾತಿಯಾದರು? ಜಾತಿಗಳೇ ನೀವೇಕೆ ಕೀಳಾದಿರೋ? ಬ್ರಾಹ್ಮಣನುಂಡುದು ಪುಲ್ಲಿಗೆ ಶೋಭಿತವಾಗಿ ನಾಯಿ ನೆಕ್ಕಿ ಹೋಯಿತು. ಮಾದಿಗರುಂಡುದು ಪುಲ್ಲಿಗೆ ಬ್ರಾಹ್ಮಣಂಗೆ ಶೋಭಿತವಾಯ್ತು ಅದೆಂತೆಂದಡೆ ಸಿದ್ಧಲಿಕೆಯಾಯ್ತು ಸಗ್ಗಳೆಯಾಯ್ತು ಸಿದ್ಧಲಿಕೆಯ ತುಪ್ಪವನ್ನು ಸಗ್ಗಳೆಯ ನೀರನ ಶುದ್ಧವೆಂದು ಕುಡಿದ ಬುದ್ಧಿಗೇಡಿ ವಿಪ್ರರಿಗೆ ನಾಯಕ ನರಕ ತಪ್ಪದಯ್ಯ!

***ಉರಿಲಿಂಗಪೆದ್ದಿಗಳರಸ ಇದನೊಲ್ಲನವ್ವಾ ಎನ್ನುತ್ತಾಳೆ.***
***ಬಸವಣ್ಣನ ವಚನ, ವೃತ್ತಿಗೂ, ಜಾತಿಗೂ ಸಂಬಂಧ ಕಲ್ಪಸುತ್ತದೆ.***
***ಕೊಲುವವನೇ ಮಾದಿಗ, ಹೊಲಸು ತಿಂಬವನೇ ಹೊಲೆಯ***
***ಕುಲವೇನೋ ಅವದಿರ ಕುಲವೇನೋ***
***ಸಕಲ ಜೀವಾತ್ಮರಿಗೆ ಲೇಸನೆ ಬಯಸುವ***
**ನಮ್ಮ ಕೂಡಲ ಸಂಗನ ಶರಣರೇ ಕುಲಜರು**

ಎಂದು ಹುಟ್ಟಿನ ಆಧಾರದ ಮೇಲೆ ಜಾತಿ ನಿರ್ಧಾರಿತವಾಗುತ್ತಿದ್ದದಕ್ಕೆ ವಿರುದ್ಧವಾಗಿ ಹೇಳಿದ್ದಾರೆ.

ಕಾಸಿ ಕಮ್ಮಾರನಾದ ಬೀಸಿ ಮಡಿವಾಳನಾದ ಹಾಸನಿಕ್ಕೆ ಸಾಲಿಗನಾದ ವೇದವನೋದಿ ಹಾರುವನಾದ ಕರ್ಣದಲ್ಲಿ ಜನಿಸಿದವರುಂಟೇ ಜಗದೊಳಗೆ ಎನ್ನುತ್ತಾರೆ ಬಸವಣ್ಣನವರು. ಇದು ಮುಖ, ತೋಳು, ತೊಡೆ, ಪಾದಗಳಿಂದ ಜನಿಸಿದ ವರ್ಣ ವ್ಯವಸ್ಥೆಗಳನ್ನು ಛೇಡಿಸುತ್ತದೆ. ವೇದಶಾಸ್ತ್ರಕ್ಕೆ ಹಾರುವನಾಗಿ ವೀರ ವಿತರಣಕ್ಕೆ ಕ್ಷತ್ರಿಯನಾಗಿ ಸರ್ವವನಾರೈದು ನೋಡುವಲ್ಲಿ ವೈಶ್ಯನಾಗಿ ವ್ಯಾಪಾರದೊಳಗಾಗಿ ಕೃಷಿಯ ಮಾಡುವುದಕ್ಕೆ ಶೂದ್ರನಾಗಿರುವನು ಎಂದು ಮಾದಾರ ಚನ್ನಯ್ಯ ಹೇಳುತ್ತಾನೆ.

ಶರಣರ ಸಿದ್ಧರಾಂನು ಒಂದೆಡೆ "ಕುಲಜನಾಗಿ ನಾನೇನಯ್ಯ ಕುಲದ ಬಳಿ ದೇವನಿಲ್ಲ. ಮನದ ಬಳಿ ದೇವನ್ನೆಸೆ ಆವಯೋನಿಜನಾದೆಡೇನು? ನೀನೊಲಿದವನೆ ಕುಲಜನಯ್ಯ, ಕಪಿಲ ಸದ್ಧ ಮಲ್ಲಿಕಾರ್ಜುನ ಎಂದ ಸ್ಪಷ್ಟವಾಗಿ ತಿಳಿಸಿದ್ದಾನೆ. ಉತ್ತಮ ಕುಲದಲ್ಲಿ ಹುಟ್ಟಿದವರೆಂಬ ಗತಿಷ್ಠತನಹೊರೆಯ ಹೊತ್ತವರಲ್ಲಿ ಶರಣರು ಉತ್ತಮರೆನ್ನುವವರ ಬಳಿ ದೇವನಿಲ್ಲ ಎನ್ನುತ್ತಾನೆ ಸಿದ್ಧರಾಮ.

ಶರಣರು ಮೂಲ ಯಾವುದಾದರೂ ಉತ್ತಮವಾಗಿ ಕಾಯಕ ಧರ್ಮವನ್ನು ನೆಚ್ಚಿ ಬಾಳುತ್ತಿದ್ದವರು ಜಾತಿ ಎನ್ನುವ ಮಣ್ಣಿನಲ್ಲಿ ಭಿನ್ನವೆನ್ನುವ ಶರಣರು ಕಾಯಕವನ್ನು ಮಹತ್ವೆಂದು ತಿಳಿದಿದ್ದರು ಆದರೆ ಹುಟ್ಟಿನೊಂದಿಗೆ ಶ್ರೀಷ್ಠತೆಯನ್ನು ಪ್ರತಿಪಾದಿಸಲಿಲ್ಲ. ಅವರು ಮತ್ತೊಬ್ಬ ಶರಣನಿಂದಾಗಿ ತಮ್ಮ ಅಂತರಂಗದ ಕತ್ತಲೆನ್ನು ಕಳೆಯಲು ತೊಡಗಿಕೊಂಡರು.

***ಚಿನ್ನ ವಿಶೇಷ, ಮಣ್ಣು ಅಧಮವೆಂದೆಡೆ***
***ಅದು ನಿಂದು ಕರಗುವುದಕ್ಕೆ***
***ಮಣ್ಣಿನ ಕೋವೆಯ ಮನೆಯಾಯಿತು.***
***ಇಷ್ಟವನ್ನರಿವ ವಸ್ತುವ ಕೆಮ್ಮುವುದಕ್ಕೆ ಇದೆ ದೃಷ್ಟ.***
***ಐಘಟದೂರ ರಾಮೇಶ್ವರ ಲಿಂಗವನರಿವುದಕ್ಕೆ ಎನ್ನುತ್ತಾರೆ ಮೆರೆಮಿಂಡ ದೇವ***

*ಆಯ್ದಕ್ಕಿ ಮಾರಯ್ಯನು ತನ್ನ ವಚನದಲ್ಲಿ ಕಾಯಕದ ಮಹತ್ವವನ್ನು ಅರಹುತ್ತ ಜಾತಿ ಮೂಲಕ್ಕಿಂತ ಕಾಯಕ ನಿಷ್ಠೇಯೇ ಶ್ರೇಷ್ಠವಾದುದು ಎನ್ನುತ್ತಾರೆ.*

***ಕಾಯಕದಲ್ಲಿ ನಿರುತವಾದರೆ, ಗುರುದರ್ಶನವಾದಡೂ ಮರೆಯಬೇಕು.***
***ಲಿಂಗ ಪೂಜೆಯಾದರೂ ಮರೆಯಬೇಕು.***
***ಜಂಗಮ ಮುಂದಿದ್ದರೂ ಹಂಗು ಹರಿಬೇಕು.***
***ಕಾಯಕವೇ ಕೈಲಾಸವಾದ ಕಾರಣ***
***ಅಮರೇಶ್ವರ ಲಿಂಗವಾಯಿತ್ತಾದಡೂ ಕಾಯಕದೊಳಗು ಎಂದು***
***ಕಾಯಕವೇ ಪರಮ ಶ್ರೇಷ್ಠವೆಂದು ಪ್ರತಿಪಾದಿಸುತ್ತಾನೆ ಆಯ್ದಕ್ಕಿ ಮಾರಯ್ಯ.***

ಕನ್ನಡ ಸಾಹಿತ್ಯ ಪರಂಪರೆಯಲ್ಲಿ 12ನೇ ಶತಮಾನ ಹೆಚ್ಚು ಚರ್ಚೆಗೆ ಒಳಗಾಗಿರುವ ಕಾಲಘಟ್ಟ ಎನ್ನಬಹುದು. ಬಸವಣ್ಣ ವಚನಕಾರರಲ್ಲಿ ಪ್ರಮುಖನಾಗಿದ್ದ. ಬ್ರಾಹ್ಮಣನಾಗಿ ಹುಟ್ಟಿದ್ದ ಬಸವಣ್ಣನಿಗೆ ಬ್ರಾಹ್ಮಣತ್ವದ ಆಸರೆಯಲ್ಲಿರುವುದು ಇಷ್ಟವಾಗಲಿಲ್ಲ. ಅದಕ್ಕಾಗಿ ಹುಟ್ಟೂರನ್ನೇ ಬಿಟ್ಟು ಕಲ್ಯಾಣಕ್ಕೆ ಬಂದ. ಆತನಿಗೆ ಬದುಕಿನ ಕಷ್ಟ ಕೋಟಲೆಗಳನ್ನು ಅರಿಯಲು ಹೆಚ್ಚು ಸಮಯ ಬೇಕಾಗಲಿಲ್ಲ. ಬಿಜ್ಜಳನಲ್ಲಿ ನೌಕರಿ ದೊರೆತರೂ ಆತ ಸಮಾಧಾನಿಯಾಗಿರಲಿಲ್ಲ. ಆ ಪ್ರದೇಶದಲ್ಲಿ ತುಳಿತಕ್ಕೆ ಒಳಗಾದ ಜನ ತಮ್ಮ ಹಕ್ಕಿಗಾಗಿ ಹೋರಾಟ ಮಾಡುತ್ತಿದ್ದುದು ಗಮನಕ್ಕೆ ಬಂತು. ಹಾಗಾಗಿ ಆ ಕಡೆ ದೃಷ್ಠಿ ಹರಿಸಲು ಸಾಧ್ಯವಾಯಿತು. ಆತನ ವಚನಗಳಲ್ಲಿ ಒಂದು ಕಡೆ ಸಾಮಾಜಿಕ ವ್ಯವಸ್ಥೆಯ ವಿರೋಧವಿದ್ದರೆ ಮತ್ತೊಂದು ಕಡೆ ವ್ಯವಸ್ಥೆಯ ದಳ್ಳುರಿಗೆ ಸಿಕ್ಕು ಜನರ ಬಗ್ಗೆ ಅನುಕಂಪವಿದೆ. ಅವರಿಗೆ ಸರಿಯಾದ ಮಾರ್ಗದರ್ಶನ ನೀಡುವ ಅನಿವಾರ್ಯತೆ ಇದೆ ಎಂದು ಬಚವಣ್ಣ ಮನಗಾಣುತ್ತಾನೆ. ವರ್ಣ ವ್ಯವಸ್ಥೆಯ ಆಧಾರದ ಮೇಲೆ ಇತರ ವರ್ಣಗಳ ಜನರಿಗೆ ಹಂಚಿಕೆಯಾದ ಹಕ್ಕು ಅಧಿಕಾರಗಳು ಶೂದ್ರ ವರ್ಗದವರಿಗೆ ನಿಗಧಿಯಾದ ಬಿಟ್ಟಿ ಕೆಲಸಗಳ

ಉದ್ದೇಶವೇ ಅಸಮಾನತೆಯ ಪ್ರತಿಪಾದನೆಯಾಗಿದೆ. ಈ ಕಾರಣದಿಂದಾಗಿ "ಅನು ಹಾರುವನೆಂದೊಡೆ ಕೂಡಲಸಂಗಮ ನಗುವನಯ್ಯಾ" ಎಂಬ ನುಡಿಯನ್ನು ತಾನೇ ಹೇಳಿಕೊಂಡಿದ್ದಾನೆ.

ಇದರಿಂದಾಗಿ ಸಮಾಜವನ್ನು ಪರಿವರ್ತಿಸಲೇ ಬೇಕೆಂಬ ಇಚ್ಛೆಯಿಂದ ಹರಳಯ್ಯ ಮತ್ತು ಮದುವರಸಯ್ಯರ ನಡುವೆ ಬೀಗತನವನ್ನು ಮಾಡುವಲ್ಲಿ ನೇತೃತ್ವ ವಹಿಸಿ ಅಂತಜಾತಿ ವಿವಾಹ ಮಾಡಿಸುತ್ತಾರೆ. ಹರಳಯ್ಯನ ಮಗನಿಗೂ ಬ್ರಾಹ್ಮಣ ಮದುವರಸಯ್ಯನ ಮಗಳಿಗೂ ಮದುವೆ ಮಾಡಿಸುವುದರಿಂದಾಗಿ ಕಲ್ಯಾಣದಲ್ಲಿ ಕುತಂತ್ರಿಗಳು, ವರ್ಣಸಂಕರವಾಯಿತೆಂದು ಉಯಿಲೆಬ್ಬಿಸುತ್ತಾರೆ. ಇದನ್ನು ಸರಿಯಾಗಿ ವಿವೇಚಿಸಿಕೊಳ್ಳದ ಬಿಜ್ಜಳ ಹರಳಯ್ಯ ಮತ್ತು ಮದುವರಸಯ್ಯನವರಿಗೆ ಆನೆಯ ಕಾಲಿಗೆ ಕಟ್ಟಿ ಎಳೆಸುವ ಶಿಕ್ಷೆಯನ್ನು ವಿಧಿಸುತ್ತಾರೆ. ಇದರಿಂದಾಗಿ ಬಸವಣ್ಣ ಬಹಳವಾಗಿ ನೊಂದುಕೊಳ್ಳುತ್ತಾರೆ. ಅಂದಿನ ರಾಜಕೀಯ ವಿದ್ಯಮಾನಕ್ಕೆ ಅನುಸಾರವಾಗಿ ಕಲ್ಯಾಣದಲ್ಲಿ ಕ್ರಾಂತಿ ಸಂಭವಿಸುತ್ತದೆ. ಬಿಜ್ಜಳ ಕೊಲೆಯಗುತ್ತಾನೆ. ಬಸವಣ್ಣ ಕಲ್ಯಾಣವನ್ನು ತೊರೆದು ಕೂಡಲಸಂಗಮಕ್ಕೆ ಬರುತ್ತಾರೆ. ಕಲ್ಯಾಣದ ಶಿವಶರಣ ಬೇರೆ ಬೇರೆ ಕಡೆ ವಲಸೆ ಹೋಗುತ್ತಾರೆ. ವಚನ ಸಾಹಿತ್ಯವನ್ನು ರಕ್ಷಿಸಿಕೊಳ್ಳುವ ಅಗತ್ಯತೆಯೂ ಕೂಡ ಅವರದಾಗಿರುತ್ತದೆ. ಆದ್ದರಿಂದ ಎಲ್ಲಾ ಶರಣರು ಕಲ್ಯಾಣವನ್ನು ತೊರೆಯುತ್ತಾರೆ.

ವಚನ ಸಾಹಿತ್ಯದಲ್ಲಿ ಮೊಟ್ಟಮೊದಲನೆಯದಾಗಿ ಗಮನಿಸಬೇಕಾದದ್ದು ಬಸವಣ್ಣನ ಸಾಧಕ ಜೀವನ. ಎಲ್ಲಾ ಸಾಧನೆಗಳಿಗೂ ಮೂಲ ಪರಿಶುದ್ಧ ವ್ಯಕ್ತಿತ್ವ ಎಂದು ನಂಬಿ ಸಾಧನೆಯ ಜೀವನದಲ್ಲಿ ಕಠೋರ ನಿಷ್ಠೆಯಿಂದ ಮುನ್ನಡೆದವನು ಆತ. ಬಸವಣ್ಣನವರ ಮಾರ್ಗ ಭಕ್ತಿ. ಭಕ್ತಿ ಭಂಡಾರಿ ಎಂದೇ ಆತ ಶರಣರಲ್ಲಿ ಪ್ರಸಿದ್ಧಿ. ಮಡಿವಾಳ ಮಾಚಯ್ಯ ಹೇಳುವ ಹಾಗೆ ಬಸವಣ್ಣನ ಭಕ್ತಿ ಜೀವನದ ವ್ಯಕ್ತಿತ್ವವನ್ನು ಸುಂದರವಾಗಿ ಚಿತ್ರಿಸುತ್ತದೆ. "ಎತ್ತೆತ್ತ ನೋಡಿದರೆ ಅತ್ತತ್ತ ಬಸವನೆಂಬ ಬಳ್ಳಿ; ಎತ್ತೆತ್ತ ನೋಡಿದರೆ ಅತ್ತತ್ತ ಲಿಂಗವೆಂಬ ಗೊಂಚಲು; ಒತ್ತಿ ಹಿಡಿದೊಡೆ ಭಕ್ತಿಯೆಂಬ ರಸವಯ್ಯ" ಅರ್ಥವತ್ತಾದ ಮಾತು ಬಸವಣ್ಣ ಎಂದರೆ ಭಕ್ತಿಯ ರಸವೇ ಮೈತಳೆದ ವ್ಯಕ್ತಿತ್ವ. ಭಕ್ತನಾದರೆ ಬಾಳೆಯ ಹಣ್ಣಿನಂತಿರಬೇಕು. ಭಕ್ತನಾದರೆ ಬೆಲ್ಲದ ಕುಳಿಯಂತಿರಬೇಕು. ಭಕ್ತನಾದರೆ ಮಾವಿನ ಫಲದಂತಿರಬೇಕು ಎಂಬ ಮಾತುಗಳು ಬಸವಣ್ಣನ ಭಕ್ತಿಯನ್ನೇ ನೋಡಿ ಹೇಳಿದಂತಿದೆ.

*ಭಕ್ತಿಯೆಂಬ ಪೃಥ್ವಿಯ ಮೇಲೆ ಗುರುವೆಂಬ ಬೀಜವಂಕುರಿಸಿ*
*ಲಿಂಗವೆಂಬ ಎಲೆಯಾಯಿತ್ತು. ಲಿಂಗವೆಂಬ ಎಲೆಯ ಮೇಲೆ*
*ವಿಚಾರವೆಂಬ ಹೂವಾಯಿತ್ತು.*
*ಆಚಾರವೆಂಬ ಕಾಯಾಯಿತ್ತಯ.*
*ನಿಷ್ಪತ್ತಿಯೆಂಬ ಹಣ್ಣಾಯಿತ್ತು;*
*ನಿಷ್ಪತ್ತಿಯೆಂಬ ಹಣ್ಣು ತೊಟ್ಟು ಕಳಚಿ ಬೀಳುವಲ್ಲಿ*

***ಕೂಡಲಸಂಗಮದೇವ ತನಗೆ ಬೇಕೆಂದು ಎತ್ತಿಕೊಂಡ ಎನ್ನುವಂತೆ ಬಸವಣ್ಣನ ಜೀವನ ಕಲ್ಯಾಣದಲ್ಲಿ ಪ್ರತಿಬಿಂಬಿತವಾಗಿದೆ.***

ಉರಿಲಿಂಗ ದೇವ ಮತ್ತು ಉರಿಲಿಂಗ ಪೆದ್ದಿ ವಚನಯುಗದಲ್ಲಿ ಮೂಡಿಬಂದ ಗುರುಶಿಷ್ಯರು. ಉರಿಲಿಂಗ ದೇವ ಮೇಲ್ವರ್ಗದ ಗುರುವಾಗಿದ್ದು ಮಠದ ನೇತೃತ್ವವನ್ನು ವಹಿಸಿದ್ದನು. ಈತ ಭಾವತಃ ಭಕ್ತನಾದರೂ ಸ್ವಭಾವತಃ ಕ್ರಾಂತಿಕಾರಿ: ಮಹಾ ವಿದ್ವಾಂಸ: ಈತನದು ನೇರವಾದ ನುಡಿ ಸರಳವಾದ ವ್ಯಕ್ತಿತ್ವ, ಮಠದ ಅಧಿಕಾರಿಯಾದರೂ ಅಧಿಕಾರದ ದರ್ಪಕ್ಕೆ ಒಳಗಾದವನಲ್ಲ. ಈತನ ಮಠ ನಂದವಾಡ ಜಿಲ್ಲೆಯಲ್ಲಿತ್ತು. ನಂದವಾಡ ಜಿಲ್ಲೆಯ ಸೂರಯ್ಯನೆಂಬ ಭಕ್ತನೊಬ್ಬನು ಉರಿಲಿಂಗದೇವನು ತನ್ನ ಮನೆಗೆ ಬರಮಾಡಿಕೊಂಡು ಶರಣ ಧರ್ಮದ ಉಪಾಸನೆ ರಹಸ್ಯವನ್ನು ಕೇಳಿದ. ಆತನಿಗೆ ತಾನೂ ಕೂಡಾ ದೀಕ್ಷೆಯನ್ನು ಪಡೆದುಕೊಳ್ಳಬೇಕೆಂಬ ಹಂಬಲ ಉಂಟಾಯಿತು. ಅದಕ್ಕಾಗಿ ಉರಿಲಿಂಗದೇವನ ಬೇಡಿಕೊಂಡು ದೀಕ್ಷಾ ಕಾರ್ಯಕ್ಕಾಗಿ ದಿನ ನಿಗದಿಪಡಿಸಿಕೊಂಡ. ಇಲ್ಲೇ ಪೆದ್ದಣ್ಣನೆಂಬುವವನೊಬ್ಬ ತನ್ನ ಹೆಂಡತಿಯ ಜೊತೆಗೆ ಜೀವನ ಮಾರ್ಗವನ್ನು ಹುಡುಕಿಕೊಂಡು ಬಂದಿದ್ದ. ಅಸ್ಪೃಶ್ಯನಾದ ಈತ ಜೀವನ ನಿರ್ವಹಣೆಗೆ ಕಳ್ಳತನವನ್ನು ಅವಲಂಬಿಸಿದ್ದನು. ಒಮ್ಮೆ ಸೂರಯ್ಯನ ಮನೆಯ ಬಳಿ ಕಳ್ಳತನಕ್ಕೆ ಹೊಂಚುಹಾಕಿ ಹೋಗುತ್ತಿದ್ದಾಗ ಉರಿಲಿಂಗದೇವ ನೀಡುತ್ತಿದ್ದ ಪೂಜಾ ಕಾರ್ಯ ಪ್ರಜ್ವಲಿಸುತ್ತಿತ್ತು.ಅಲಿ ಪೆದ್ದಣ್ಣ ತಾನು ಬಂದ ಉದ್ದೇಶವನ್ನು ಮರೆತು ದೀಕ್ಷಾ ಕ್ರಮವನ್ನು ಗವಾಕ್ಷಿಯ ಮೂಲಕ ನೋಡುತ್ತಾ ನಿಂತುಬಿಟ್ಟ. ನಂತರ ತನ್ನ ಕಳ್ಳತನ ವೃತ್ತಿಯನ್ನು ಬಿಟ್ಟು ಉರಿಲಿಂಗದೇವನಲ್ಲಿ ದೀಕ್ಷೆಯನ್ನು ಅನೇಕ ಪ್ರಯತ್ನದ ನಂತರ ಪಡೆದುಕೊಳ್ಳಲು ಸಫಲನಾದ ನಂತರ ಉರಿಲಿಂಗ ಪೆದ್ದಿ ಎಂಬ ಎಂಬ ಹೆಸರಿನಿಂದ ಶಿವಶರಣನಾಗುತ್ತಾನೆ. ಉರಿಲಿಂಗದೇವನ ನಂತರ ಮಠಾಧಿಪತಿಯಾಗಿ ನೇಮಕವಾಗುವ ಈತ ಅಸ್ಪೃಶ್ಯನೆಂಬ ಕಾರಣಕ್ಕೆ ಸಮಾಜದ ವಿರೋಧಕ್ಕೆ ಒಳಗಾಗುತ್ತಾರೆ. ಉರಿಲಿಂಗದೇವ ಮಠಾಧಿಪತಿಯನ್ನಾಗಿ ಉರಿಲಿಂಗ ಪೆದ್ದಿಯನ್ನು ಮಾಡಿಯೇ ತೀರಿದಾಗ ನಂತರ ಕುತಂತ್ರಿಗಳಿಂದಾಗಿ ಮಠದ ಒಳಗೆ ಗುರುಶಿಷ್ಯರಿಗೆ ಹೊರಗಿನಿಂದ ಮಠದ ಬಾಗಿಲನ್ನು ಹಾಕಿ ಬೆಂಕಿ ಹಚ್ಚಿ ಕೊಲ್ಲಲ್ಲಾಗುತ್ತದೆ. ಈ ಘಟನೆ ಬಸವಣ್ಣನ ವಿಚಾರಗಳನ್ನು ಜಾರಿಗೆ ತರಲು ಇದ್ದ ವಿರೋಧವನ್ನು ತಿಳಿದುಕೊಳ್ಳಬಹುದು.

ಅಲ್ಲಮ ಪ್ರಭು ಕಲ್ಯಾಣದಲ್ಲಿ ಮೇರು ಪರ್ವತದಂತೆ ಇದ್ದ ಮಹಾ ಶರಣ. ಅನುಭವ ಮಂಟಪದ ಶೂನ್ಯ ಪೀಠಾಧಿಪತಿ. ಇವನು ಸಿದ್ದರಾಮನನ್ನು ಆತನ ಆತ್ಮ ಪ್ರಸಂಶೆಯನ್ನು ದೂರ ಮಾಡಿ ಶರಣನಾಗಿಸಿದನು ಸಿದ್ದರಾಮನು ಪ್ರಸಿದ್ಧಿಗಾಗಿ ಕಟ್ಟಡಗಳನ್ನು ಕೆರೆಕಟ್ಟೆಗಳನ್ನು ಕಟ್ಟಿಸಿ ತಾನು ಕಟ್ಟಿಸಿದ ಕಟ್ಟಡಗಳೆಂದು ಬೀಗುವಾಗ ಆತನ ಅಂಧಕಾರವನ್ನು ಕಳೆದು ಶರಣನನ್ನಾಗಿ ಮಾಡಿದರು. ನಂತರ ಸಿದ್ದರಾಮ ಶಿವಯೋಗಿಯೆಂದೇ ಪ್ರಸಿದ್ಧನಾದ.

## ಉಪಸಂಹಾರ

ವಚನ ಸಾಹಿತ್ಯವೆನ್ನುವುದು ಕನ್ನಡದ ಪುಣ್ಯದಿಂದ ಅವತರಿಸಿದ ಒಂದು ವಿಶಿಷ್ಟ ಸಾಹಿತ್ಯ ಜಗತ್ತಿನ ಬೇರೆಲ್ಲೂ ಇಂತಹ ಸಾಹಿತ್ಯ ಬಹುಶಃ ನಿರ್ಮಾಣವಾಗಿಲ್ಲವೆಂದು ಹೇಳಬಹುದು. ಮುಖ್ಯವಾಗಿ ವಚನ ಸಾಹಿತ್ಯ ನಿರ್ವಹಿಸುವ ಭೂಮಿಕೆ ಎಂದರೆ ಸಮಾಜ ಸುಧಾರಣೆ, ಅಂತರಂಗ ಬಗಿರಂಗ ಶುದ್ಧಿಯ ಬಗ್ಗೆ ವಚನಕಾರರು ಒತ್ತುಕೊಟ್ಟು ಹೇಳಿದರು. ವ್ಯಕ್ತಿ ಒಂದು ಸಾಮಾಜದ ಅತಿ ಮುಖ್ಯ ಘಟ್ಟವಾಗಿರುವುದರಿಂದ ಅವನ ಸುಧಾರಣೆಯಾದರೆ ಇಡೀ ಸಮಾಜ ಸುಧಾರಣೆಯಾದೀತು ಎಂಬುದು ಅವರ ನಂಬಿಕೆಯಾಗಿತ್ತು. ಹೀಗಾಗಿ ಅದನ್ನು ಗಮನದಲ್ಲಿಟ್ಟು ಕೊಂಡೇ ತಮ್ಮ ವಚನಗಳಲ್ಲಿ ಅನೇಕ ವಚನಕಾರರು ತಮ್ಮ

ಅಭಿಪ್ರಾಯವನ್ನು ವ್ಯಕ್ತಪಡಿದುವುದನ್ನು ಕಾಣಬಹುದಾಗಿದೆ. ವಚನ ಯುಗದಲ್ಲಿ ಜಾತಿ ವ್ಯವಸ್ಥೆಯನ್ನು ಅನೇಕ ವಚನಕಾರರು ವಿರೋಧಿಸುತ್ತಾರೆ. ಸಮಾಜದ ಸುಧಾರಣೆಗೆ ಅವರು ಹೆಚ್ಚಿನ ಒತ್ತು ಕೊಟ್ಟಿದ್ದಾರೆ. ಆದ್ದರಿಂದಲೇ ಸಾಹಿತ್ಯಕವಾಗಿಯೂ ಕೂಡಾ ವಚನಯುಗ ಪ್ರಮುಖ ಸ್ಥಾನವನ್ನು ಗಳಿಸಿಕೊಂಡಿದೆ.

**ಪರಾಮರ್ಶನ ಗ್ರಂಥಗಳು**


- ಚಿಕ್ಕಮಾದು. ಎನ್.ಎನ್. (2011). ವಚನಸಾಹಿತ್ಯ ಮತ್ತು ದಾಸಸಾಹಿತ್ಯಗಳ ಸಮೀಕ್ಷೆ. ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯ, ಮೈಸೂರು.
- ಕಸ್ತೂರಿ. (2011). ಬಸವಣ್ಣನವರ ವಚನಗಳು. ಸ್ಟೂಡೆಂಟ್ ಬುಕ್ ಕಂ., ಬೆಂಗಳೂರು.
- ಮುಗಳಿ. ರಂ.ಶ್ರೀ. (1978). ಕನ್ನಡ ಸಾಹಿತ್ಯ ಚರಿತ್ರೆ. ಉಷಾ ಪ್ರೆಸ್, ಮೈಸೂರು.
- ತಿಪ್ಪೇರುದ್ರಸ್ವಾಮಿ. ಎಚ್. (2009). ಕರ್ನಾಟಕ ಶರಣ ಕಥಾಮೃತ. ಡಿ.ವಿ.ಕೆ.ಮೂರ್ತಿ ಪ್ರಕಾಶನ, ಮೈಸೂರು.
- ಉಷಾಕಿರಣ್. (2001). ಬಸವೇಶ್ವರ ಮತ್ತು ಪ್ರತಿಮಾ ನಿರ್ಮಿತಿ. ಆನಂದ ಪ್ರಕಾಶನ, ಬೆಂಗಳೂರು.


IIMRD
JOURNALS